ನಡುಬಾಡೆ ಇ-ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:48 ದಿನಾಂಕ: 19/11/26, ಗುರುವಾರ 8951073556 ನಾಳಂಕೆ :ಬಿಚ್ಯಾರ್ - 04, ಪದ್ನಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ಪುಟ: 1

ಕೊಡವಾಮೆರ ತಗರ್ದಿಕೊತ್ತ ಮಡಿಕೇರಿ ಮಂದ್, ಪುನಾದ್ಯ ತೊರ್ಪ

ನ.21ನೇ ಒಯ್ಪತ್ 4ಘಂಟೆಕ್ ಮ್ಯಾನ್ಸ್‌ಕಾಂಪೌಂಡ್ ಪಕ್ಕತ ಮಂದ್‌ಪರಂಬುಲ್ ಆಯಿಮೆ...



@nadubadenews; ಮಡಿಕೇರಿ,ನ.19: ಕೊಡವ ಪರಂಪರೆರ ಆಯಿಮೆ ಕೊಯಿಮೆರ ಪೆರುಂಗುರ್ತ್ ಆನ ಮಡಿಕೇರಿ ಕೊಡವ ಸಮಾಜತ ಆದನೆಲುಳ್ಳ, ಸುಮಾರ್ 150 ಕಾಲಕ್ಕಿಂಜ ಪಳಿಯಾಮೆ ಉಳ್ಳ ಕೋಲ್‌ಮಂದ್‌ನ ₹19 ಲಕ್ಷ ಕರ್ಚ್‌ಲ್ ಪೂರ್ತಿಯಾಯಿತ್ ಪುದಿಯಾಮೆಕ್ ಮಾತಿತ್. ಪುದಿಯಾಮೆಲ್ ಎಲಂಗಿತ್ ನಿಂದ ಮಂದ್‌ನ ಬೊಳಿಪಡ್'ತುವೊ ಆಯಿಮೆ ಇದೇ ನವೆಂಬರ್ 21ಗ್ ಒಯಿಪತ್ 4 ಗಂಟೆಕ್ ನಡ್ಪದುಂಡ್‌ಂದ್ ಮಡಿಕೇರಿ ಕೊಡವ ಸಮಾಜ ಕೊರುವಕಾರ ಮಂಡುವಂಡ ಪಿ. ಮುತ್ತಪ್ಪ ಅರಿಚಿಟ್ಟಿತ್.

ಮಡಿಕೇರಿರ ಪತ್ರಿಕಾಭವನತ್'ರ ಸುದ್ದಿಗೋಷ್ಠಿಲ್ ತಕ್ಕ್ ಪರ್‌ಂದ ಅವು, ಮಡಿಕೇರಿರ ಜನರಲ್ ತಿಮ್ಮಯ್ಯ ಪರ್‌ಂಬುರ ಪಕ್ಕತುಳ್ಳ ಕೊಡವ ಸಮಾಜಕ್ ಕೂಡ್'ನ ಸುಮಾರು 30 ಸೆಂಟ್ಸ್ ಜಾಗನ ಸರ್ಕಾರ ಮಿಂಞಲೆ ಸಮಾಜಕ್ ತಂದಿತಿಂಜತ್. ಈ ಜಾಗತ್'ನ ಪುತ್ತರಿ ನಮ್ಮೆರ ಆಯಿಮೆ ಕೊಯಿಮೆ ಕೂಡ್'ನನ್ನೆಕೆ ಬೋರೆಬೋರೆ ಕಾರ್ಬಾರ್‌ಕ್ ಬಳಸಿಯಂಡ್ ಉಂಡ್‌ಂದ್ ಎಣ್ಣ್'ಚಿ.

ಮಂದ್‌ರ ಸುತ್ತೋ ಸುತ್ತೊ ಬೇಲಿ ಇಟ್ಟಿತ್, ಸಮತಟ್ಟ್ ಮಾಡಿತ್ ಎಲಂಗಿ ನಿಪ್ಪನ್ನೆಕೆ ಮಾಡಿತ್. ಇದಂಗೂ ಮಿಂಞ ಈ ಮಂದ್'ಲ್ ನೇಡಿತ್ ನಿಂದಿತಿಂಜ ಬಲ್ಯೊರ್ ಅತ್ತಿ ಮರ, 2025ನೇ ಜುಲೈ 7ಗ್ ಬುದ್ದ ಬಲ್ಯ ಮಳೆಕ್ ನೆಲಕ್ ಬುದ್ದಿತಿಂಜತ್. ಅದೇ ಜಾಗತ್ ಪುದಿಯ ಚಪ್ಪೆಮರ ಗಿಡತ್'ನ ನೆಡ್ಪಂಜ ನೇಂದಿತ್ ನಿಪ್ಪನ್ನೆಕೆ ಮಾಡಿತ್, ಮಂದ್‌ರ ಪರಂಪರೆನ ಮಿಂಞಕ್ ಪೋಪ ಪೆರುಂಗುರ್ತ್ ಆಯ್ತ್ ಗಿಡ ಬೊಳಂದಂಡ್ ಉಂಡ್.

ಕಾಲಾಂಡ್'ರ ಪುತ್ತರಿ ನಮ್ಮೆ ಕಯಿಂಜದು ಮಡಿಕೇರಿ ನಾಡ್ ಪಿಂಞ ಸುತ್ತೊ ಉಳ್ಳ ಊರ್ ಕೇರಿರ ಕೊಡವ ಬೆಂದುವ ಪುತ್ತರಿ ಕೋಲಾಟ್'ನ ನಡ್ತಿಯಂಡ್ ಬಂದಂಡ್ ಉಂಡ್. ಪುತ್ತರಿ ನಮ್ಮೆಕ್ ಮೂಂದ್ ದಿನಕ್ ಮಿಂಞ ಕೋಲಾಟ್ 'ಈಡ್' ಕಾರ್'ಬಾರ್ ಇದೇ ಮಂದ್'ಲ್ ನಡ್ಪ. ಈ ಕಾರ್'ಬಾರ್‌ಂಜ ಕೊಡವ ಸಂಸ್ಕೃತಿ ಪಿಂಞ ಪರಂಪರೆನ ಮಿಂಞತ್ರ ಕ್'ರ್‌ಂದಲೆಕ್ ಕೊಂಡಪೋಪಕ್ ನಿಕ್ಕತೆ ನಡ್'ತಿಯಂಡ್ ಉಂಡ್. ಮಂದ್‌ರ ಸುತ್ತೋ ಸುತ್ತೊ ಬೇಲಿ ಇಟ್ಟಿತ್, ಸಮತಟ್ಟ್ ಮಾಡಿತ್ ಎಲಂಗಿ ನಿಪ್ಪನ್ನೆಕೆ ಮಾಡಿತ್.

ಇದಂಗೂ ಮಿಂಞ ಈ ಮಂದ್'ಲ್ ನೇಡಿತ್ ನಿಂದಿತಿಂಜ ಬಲ್ಯೊರ್ ಅತ್ತಿ ಮರ, 2025ನೇ ಜುಲೈ 7ಗ್ ಬುದ್ದ ಬಲ್ಯ ಮಳೆಕ್ ನೆಲಕ್ ಬುದ್ದಿತಿಂಜತ್. ಅದೇ ಜಾಗತ್ ಪುದಿಯ ಚಪ್ಪೆಮರ ಗಿಡತ್'ನ ನೆಡ್ಪಂಜ ನೇಂದಿತ್ ನಿಪ್ಪನ್ನೆಕೆ ಮಾಡಿತ್, ಮಂದ್‌ರ ಪರಂಪರೆನ ಮಿಂಞಕ್ ಪೋಪ ಪೆರುಂಗುರ್ತ್ ಆಯ್ತ್ ಗಿಡ ಬೊಳಂದಂಡ್ ಉಂಡ್.

ಕಾಲಾಂಡ್'ರ ಪುತ್ತರಿ ನಮ್ಮೆ ಕಯಿಂಜದು ಮಡಿಕೇರಿ ನಾಡ್ ಪಿಂಞ ಸುತ್ತೊ ಉಳ್ಳ ಊರ್ ಕೇರಿರ ಕೊಡವ ಬೆಂದುವ ಪುತ್ತರಿ ಕೋಲಾಟ್'ನ ನಡ್ತಿಯಂಡ್ ಬಂದಂಡ್ ಉಂಡ್. ಪುತ್ತರಿ ನಮ್ಮೆಕ್ ಮೂಂದ್ ದಿನಕ್ ಮಿಂಞ ಕೋಲಾಟ್ 'ಈಡ್' ಕಾರ್'ಬಾರ್ ಇದೇ ಮಂದ್'ಲ್ ನಡ್ಪ. ಈ ಕಾರ್'ಬಾರ್‌ಂಜ ಕೊಡವ ಸಂಸ್ಕೃತಿ ಪಿಂಞ ಪರಂಪರೆನ ಮಿಂಞತ್ರ ಕ್'ರ್‌ಂದಲೆಕ್ ಕೊಂಡಪೋಪಕ್ ನಿಕ್ಕತೆ ನಡ್'ತಿಯಂಡ್ ಉಂಡ್. ಮಂದ್‌ರ ಸುತ್ತೋ ಸುತ್ತೊ ಬೇಲಿ ಇಟ್ಟಿತ್, ಸಮತಟ್ಟ್ ಮಾಡಿತ್ ಎಲಂಗಿ ನಿಪ್ಪನ್ನೆಕೆ ಮಾಡಿತ್.

ನ.21ಗ್ ಒಯಿಪತ್ ನಾಲ್ ಘಂಟೆಕ್ ಮಂದ್‌ಗರೆಲ್ ಮಡಿಕೇರಿ ಕೊಡವ ಸಮಾಜತ್ರ ಕೊರುವಕಾರ ಮಂಡುವಂಡ ಪಿ. ಮುತ್ತಪ್ಪ ಅಯಿಂಗಡ ಕೊರುವಕಾರಿಕೆಲ್ ನಡ್ಪ ಆಯಿಮೆಲ್, ಅಖಿಲ ಕೊಡವ ಸಮಾಜ ಕೊರುವಕಾರ ಪರದಂಡ ಸುಬ್ರಮಣಿ ಅವು ಕೋಲ್ ಮಂದ್‌ನ ಬೊಳಿಪಡ್ತುವ. ಕೊಡವ ಸಮಾಜ ಒಕ್ಕೂಟ ಕೊರುವಕಾರ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅಯಿಂಗ ಮಂದ್‌ರ ಪೆದಪಟ್ಟಿನ ಬೋಳಿಪಡ್ತುವ.

ಮಡಿಕೇರಿ ಶಾಸಕ ಡಾ. ಮಂತರ್ ಗೌಡ ಆಯಿಮೆಕ್ ಮೊಳಿ ಇಟ್ಟಕ, ಮುಖ್ಯಮಂತ್ರಿರ ರಾಜಕೀಯ ಕಾರ್ಯಕಾರ ಪಿಂಞ ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ, ಕೊಡವ- ಮೈಸೂರ್ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪಿಂಞ ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಖನಪಟ್ಟ ಬೆಂದುವಳಾಯಿತ್ ಕೂಡಿಯಾಡುವ.

ಬೆಂದುವಳಾಯಿತ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕೊರವುಕಾರ ಅಜ್ಜನಿಕಂಡ ಮಹೇಶ್ ನಾಚಯ್ಯ, ಜಿಲ್ಲಾ ಗ್ಯಾರಂಟಿ ಯೋಜನೆರ ಅನುಷ್ಠಾನ ಸಮಿತಿರ ಕೊರವುಕಾರ ತೀತಿರ ಧರ್ಮಜ ಉತ್ತಪ್ಪ, ಮಾಜಿ ಸಚಿವ ಮಂಡೇಪಂಡ ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಮಾಜಿ ಸದಸ್ಯಂಗಳಾನ ಶಾಂತೆಯಂಡ ವೀಣಾ ಅಚ್ಚಯ್ಯ ಪಿಂಞ ಮಂಡೇಪಂಡ ಸುನಿಲ್ ಸುಬ್ರಮಣಿ, ಕೊಡವ್ ಜಿಲ್ಲಾ ಪಂಚಾಯತ್ ಮಾಜಿ ಕೊರವುಕಾರ ಶಾಂತೆಯಂಡ ರವಿ ಕುಶಾಲಪ್ಪ, ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ, ಕೊಡವ ನ್ಯಾಷನಲ್ ಕೌನ್ಸಿಲ್ ಕೊರವುಕಾರ ನಂದಿನೆರವಂಡ ಯು. ನಾಚಪ್ಪ ಯುಕೋ ಸಂಘಟನೆರ ಕೊರವುಕಾರ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಜಬ್ಬೂಮಿ ಟ್ರಸ್ಟ್ ಕೊರವುಕಾರ ಚೊಟ್ಟೇಕ್‌ಮಾಡ ರಾಜೀವ್ ಬೋಪಯ್ಯ, ಕನೆಕ್ಟಿಂಗ್ ಕೊಡವಾಸ್ ಕೊರವುಕಾರ ಶಾಂತೆಯಂಡ ನಿರನ್ ನಾಚಪ್ಪ, ಕೊಡಗು ಏಕೀಕರಣ ರಂಗ ಮೂಪ ಅಜ್ಜಿನಂಡ ತಮ್ಮು ಪೂವಯ್ಯ, ಕೊಡವ ಅಮ್ಮ ಕೊಡವ ಟ್ರಸ್ಟ್ ಕೊರವುಕಾರ ಮುದ್ದಂಡ ಬಿ. ದೇವಯ್ಯ, ಕೊಡವ ಮಕ್ಕಡ ಕೂಟ ಕೊರವುಕಾರ ಬೊಳ್ಳಜಿರ ಅಯ್ಯಪ್ಪ, ಕೊಡವಾಮೆರ ಕೊಂಡಾಟ ಕೊರವುಕಾರ ಚಾಮೇರ ದಿನೇಶ್‌ಬೆಳ್ಯಪ್ಪ, ಕೊಡವ ವಿದ್ಯಾನಿಧಿ ಕೂಟ್‌ಕೊರವುಕಾರ ಕೊಡಂದೆರ ಸರೋಜಿ ಪೂವಣ್ಣ, ವೇಕ್ ಸಂಘಟನೆ ಕೊರವುಕಾರ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ, ಕೊಡವ ಸಮಾಜ ಸಾಂಸ್ಕೃತಿಕ ಕೇಂದ್ರದ ಕೊರವುಕಾರ ಮುಳ್ಳಂಡ ರತ್ತು ಚಂಗಪ್ಪ, ಕೊಡವ ಸಮಾಜ ಪೊಮ್ಮಕ್ಕಡ ಕೂಟದ ಕೊರವುಕಾರಿ ಕನ್ನಂಡ ಕವಿತ ಬೊಳ್ಳಪ್ಪ, ಕೊಡವ ಸಮಾಜದ ಮಾಜಿ ಕೊರವುಕಾರ ಕೊಂಗಂಡ ಎಸ್. ದೇವಯ್ಯ ಪಿಂಞ ಮೂವೇರ ಶಂಭು ಸುಬ್ಬಯ್ಯ, ಆದಿ ಬ್ರಹ್ಮಗಿರಿ ಸಂಪಾದಕ ಡಾ. ಉಳ್ಳಿಯಡ ಎಂ. ಪೂವಯ್ಯ ಅವು ಕೂಡಿಯಾಡುವ.

ಇದಲ್ಲತೆ ಕೊಡವ ಸಮಾಜ ಕೊರವುಕಾರಂಗ ಪಿಂಞ ಆಡಳಿತ ಮಂಡಳಿ ಸದಸ್ಯಂಗ, ಮಡಿಕೇರಿರ ಎಲ್ಲಾ ಕೊಡವ ಕೇರಿರ ಮೂಪಂಗ, ಕೊಡವ ಸಮಾಜ ಸದಸ್ಯಂಗ ಪಿಂಞ ಜನಾಂಗ ಮೂಪಂಗ ಕೂಡಿಯಾಡುವದುಂಡ್ ಮಂಡುವಂಡ ಮುತ್ತಪ್ಪ ಅಯಿಂಗ ಅರಿಚಿಟ್ಟಿತ್.

ಸುದ್ದಿಗೋಷ್ಠಿಲ್ ಕೊಡವ ಸಮಾಜ ಕೂಟ್ ಕೊರವುಕಾರ ಕೇಕಡ ಎ. ದೇವಯ್ಯ, ಖನಪಟ್ಟಕಾರ್ಯಕಾರಿ ಬೊಪ್ಪಂಡ ಸರಳ ಕರುಂಬಯ್ಯ, ಕೂಡ್‌ಕಾರ್ಯಕಾರ ನಂದಿನೆರವಂಡ ಎಂ. ದಿನೇಶ್ ಕೂಟಾಳಿಯಳಾನ ಶಾಂತೆಯಂಡ ವಿಶಾಲ್ ಕಾರ್ಯಪ್ಪ ಪಿಂಞ ಕಾಳಚಂಡ ಎಂ. ಅಪ್ಪಣ್ಣ ಇಂಜತ್

ನ.21 ರಂದು ಕೊಂಡಂಗೇರಿಯಲ್ಲಿ ಪ್ರಜಾಸೇವಾ ಅಭಿಯಾನ

@nadubadenews; ಮಡಿಕೇರಿ,ನ.19

ವಿರಾಜಪೇಟೆ ತಾಲ್ಲೂಕಿನ ಅಮ್ಮತ್ತಿ ಹೋಬಳಿ ಮಟ್ಟದ ಪ್ರಜಾಸೇವಾ ಅಭಿಯಾನವು ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕರಾದ ಎ.ಎಸ್.ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ನವೆಂಬರ್, 21 ರಂದು ಬೆಳಗ್ಗೆ 11 ಗಂಟೆಗೆ ಕೊಂಡಂಗೇರಿಯ ಶಾದಿ ಮಹಲ್‌ನಲ್ಲಿ ನಡೆಯಲಿದೆ. ಸಾರ್ವಜನಿಕರು ಅಹವಾಲು ಸಲ್ಲಿಸಬಹುದು ಎಂದು ವಿರಾಜಪೇಟೆ ತಾಲ್ಲೂಕು ತಹಶೀಲ್ದಾರರಾದ ಪ್ರವೀಣ್ ಕುಮಾರ್ ಅವರು ತಿಳಿಸಿದ್ದಾರೆ.



ಪುತ್ತರಿಕ್ ಮೂಂದ್ ನಾಳ್ ರಜೆಕ್ ಅಖಿಲ ಕೊಡವ ಸಮಾಜ ಬೋಡಿಕೆ...



ದುಗ್ಗಳ

@Nadubadenews; ನ.19;

ವಿರಾಜಪೇಟೆ: ಕೊಡವ ಪರಂಪರೆಲ್ ಕೇಳಿಪಟ್ಟ ಪಿಂಞ ಕೊಡವಾಮೆರ ಭೀರ್ಯಕೊತ್ತ ಪುತ್ತರಿನಮ್ಮೆರ ಮಾರೀಪತ್, ಈಡ್ ಮಂದ್‌ಂಜಿ ತೊಟ್ಟ್ ಮನೆಪಾಡೋಲ್ಲಿಕೆತ್ತನೆ, ತರಾವರಿ ಆಯಿಮೆ ಕೊಯಿಮೆ, ಆಟ್ ಪಾಟ್ ಇಪ್ಪಾನುಂಡ್ ಸರ್ಕಾರ ಮೂಂದ್ ನಾಳ್ ಸರ್ಕಾರಿ ರಜೆ ತಂದಿತ್, ಉಲಗತೇ ಕೇಳಿಪೋನ ಸಂಸ್ಕೃತಿನ ಪೋತುವಕ್ ಬಲಕೂಟಂಡೂಂದ್, ಮುಖ್ಯಮಂತ್ರಿರ ರಾಜಕೀಯ ಕಾರ್ಯಕಾರ ಪಿಂಞ ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣ ಅಯಿಂಗಕ್ ಕಾಗದತೋಡೆ ಬೋಡಿಕೆ ಬೆಚ್ಚತ್.

ಇದಂಡ ಕೂಟ್‌ಕ್ ಕೊಡವ ಪರಂಪರೆನ ಇಂಞಚ್ಚಕೂ ಉಳ್ತಿ ಪೋತುವಕ್ ಏತುವಾಪನ್ನಕೆ ಅಖಿಲ ಕೊಡ ಸಮಾಜಕ್ ಸರ್ಕಾರತಿಂಜ 20ಏಕರೆ ಜಾಗ ತರೋಂಡೂಂದೂ ಬೋಡಿಕೆ ಬೆಚ್ಚತ್, ಈ ನ್ಯಾರತ್ ಅಖಿಲ ಕೊಡವ ಸಮಾಜ ಕೊರವುಕಾರ ಪರದಂಡ ಸುಬ್ರಮಣಿ ಪಿಂಞ ಕೂಟಾಳಿಯ ಇಂಜತ್.

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 19/11/26, ಗುರುವಾರ 8951073556 ನಾಳಂಕೆ : ಬಿರ್ಬಾರ್ - 04, ಬ್ಯಾಳಚೆ
www.nadubadenews.com ಸಂಪಾದಕ:ಚಾಮರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ನಾಳೆಯ (17 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ವ್ಯಾಪಾರದಲ್ಲಿ ಹೊಸ ಪಾಲುದಾರಿಕೆಗಳು ರೂಪುಗೊಳ್ಳುವ ಸಾಧ್ಯತೆಯಿದೆ. ನಿಮ್ಮ ನಿರ್ಧಾರಗಳು ಭವಿಷ್ಯದಲ್ಲಿ ಉತ್ತಮ ಫಲ ನೀಡಲಿವೆ. ಕುಟುಂಬದ ಹಿರಿಯರ ಆರೋಗ್ಯ ಸುಧಾರಿಸಲಿದೆ.

ವೃಷಭ
ಆರ್ಥಿಕವಾಗಿ ಸ್ಥಿರತೆ ಕಂಡುಬರಲಿದ್ದು, ಹಳೆಯ ಬಾಕಿ ಹಣ ಕೈಸೇರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ದೊರೆಯಲಿದೆ. ಸಂಗಾತಿಯೊಂದಿಗೆ ಸಂತಸದ ಸಮಯ ಕಳೆಯುವಿರಿ

ಮಿಥುನ
ಹೊಸ ಯೋಜನೆಗಳನ್ನು ಆರಂಭಿಸಲು ಇಂದು ಶುಭ ದಿನವಾಗಿದೆ. ಮಾತಿನ ಮೇಲೆ ಹಿಡಿತವಿರಲಿ, ಅನಾವಶ್ಯಕ ವಾದಗಳಿಂದ ದೂರವಿರಿ. ದೂರ ಪ್ರಯಾಣದ ಯೋಗವಿದ್ದು, ಅದರಿಂದ ಲಾಭವಾಗಲಿದೆ.

ಕರ್ಕಾಟಕ
ಮನೆಯಲ್ಲಿ ಶುಭ ಕಾರ್ಯಗಳ ಬಗ್ಗೆ ಚರ್ಚೆ ನಡೆಯಲಿದೆ. ಮಾನಸಿಕ ನೆಮ್ಮದಿಗಾಗಿ ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗುವಿರಿ. ಖರ್ಚುಗಳ ಮೇಲೆ ಸ್ವಲ್ಪ ನಿಯಂತ್ರಣವಿರುವುದು ಒಳ್ಳೆಯದು.

ಸಿಂಹ
ಸಮಾಜದಲ್ಲಿ ನಿಮ್ಮ ಗೌರವ ಮತ್ತು ಪ್ರತಿಷ್ಠೆ ಹೆಚ್ಚಾಗಲಿದೆ. ವೃತ್ತಿಜೀವನದಲ್ಲಿ ಹೊಸ ಜವಾಬ್ದಾರಿಗಳು ಹೆಗಲೇರಲಿವೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಅಗತ್ಯ.

ಕನ್ಯಾ
ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚಾಗಲಿದ್ದು, ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಹೂಡಿಕೆ ಮಾಡುವ ಮುನ್ನ ಹಿರಿಯರ ಸಲಹೆ ಪಡೆಯಿರಿ. ಮಿತ್ರರ ಭೇಟಿಯಿಂದ ಮನಸ್ಸಿಗೆ ಉಲ್ಲಾಸ ಸಿಗಲಿದೆ.

ತುಲಾ
ದಾಂಪತ್ಯ ಜೀವನದಲ್ಲಿ ಸಾಮರಸ್ಯ ಮತ್ತು ಪ್ರೀತಿ ಹೆಚ್ಚಾಗಲಿದೆ. ವ್ಯಾಪಾರ-ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರೆಯಲಿದೆ. ಹೊಸ ವಾಹನ ಅಥವಾ ಆಸ್ತಿ ಖರೀದಿಯ ಯೋಚನೆ ಕಾರ್ಯರೂಪಕ್ಕೆ ಬರಲಿದೆ

ವೃಶ್ಚಿಕ
ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವ ದಿನವಿದು. ವಿರೋಧಿಗಳ ತಂತ್ರಗಳು ವಿಫಲವಾಗಿ ನಿಮಗೆ ಜಯ ಸಿಗಲಿದೆ. ಸಂಜೆಯ ವೇಳೆಗೆ ಶುಭ ಸುದ್ದಿಯೊಂದನ್ನು ಕೇಳುವಿರಿ.

ಧನು
ಸೃಜನಶೀಲ ಕೆಲಸಗಳಲ್ಲಿ ಆಸಕ್ತಿ ಹೆಚ್ಚಾಗಲಿದ್ದು, ಮೆಚ್ಚುಗೆ ಗಳಿಸುವಿರಿ. ಮಕ್ಕಳ ಪ್ರಗತಿಯಿಂದ ಮನೆಯಲ್ಲಿ ಸಂತೋಷದ ವಾತಾವರಣವಿರಲಿದೆ. ಆಹಾರ ಪದ್ಧತಿಯ ಬಗ್ಗೆ ಎಚ್ಚರಿಕೆ ವಹಿಸಿ.

ಮಕರ
ಕೌಟುಂಬಿಕ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಉದ್ಯೋಗ ಬದಲಾವಣೆಗೆ ಪ್ರಯತ್ನಿಸುತ್ತಿರುವವರಿಗೆ ಉತ್ತಮ ಅವಕಾಶಗಳು ಸಿಗಲಿವೆ. ತಾಯಿಯವರ ಆಶೀರ್ವಾದದಿಂದ ಕೆಲಸಗಳು ಸುಗಮವಾಗಲಿವೆ.

ಕುಂಭ
ನಿಮ್ಮ ಆತ್ಮವಿಶ್ವಾಸ ಹೆಚ್ಚಾಗಲಿದ್ದು, ಬಾಕಿ ಉಳಿದಿದ್ದ ಕೆಲಸಗಳನ್ನು ಪೂರ್ಣಗೊಳಿಸುವಿರಿ. ಒಡಹುಟ್ಟಿದವರಿಂದ ಆರ್ಥಿಕ ಅಥವಾ ನೈತಿಕ ಬೆಂಬಲ ಸಿಗಲಿದೆ. ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳು ನಿವಾರಣೆಯಾಗಲಿವೆ.

ಮೀನ
ಆರ್ಥಿಕ ಲಾಭದ ಹೊಸ ಮೂಲಗಳು ತೆರೆದುಕೊಳ್ಳಲಿವೆ. ಕುಟುಂಬ ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಯಾಗಲಿದೆ. ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳುವಾಗ ತಾಳ್ಮೆಯಿಂದ ಯೋಚಿಸಿ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ಘತ ಕಾಲದಲ್ಲಿ ಈ ದಿನ... 17ನವೆಂಬರ್ 2026


ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ *ರಾಷ್ಟ್ರೀಯ ಏಕೀಕರಣ ದಿನ (ಭಾರತ).* ದೇಶದಲ್ಲಿ ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತದೆ.

⭐ *ವಿಶ್ವ ಶೌಚಾಲಯ ದಿನ.* ಜಾಗತಿಕ ನೈರ್ಮಲ್ಯ ಬಿಕ್ಕಟ್ಟನ್ನು ನಿವಾರಿಸಲು ಮತ್ತು ಎಲ್ಲರಿಗೂ ಸುರಕ್ಷಿತ ಶೌಚಾಲಯ ಸೌಲಭ್ಯ ಒದಗಿಸುವ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆ ಈ ದಿನವನ್ನು ಆಚರಿಸುತ್ತದೆ

⭐ *ಅಂತರರಾಷ್ಟ್ರೀಯ ಪುರುಷರ ದಿನ.* ಪುರುಷರ ಆರೋಗ್ಯ, ಲಿಂಗ ಸಮಾನತೆ ಮತ್ತು ಸಮಾಜಕ್ಕೆ ಪುರುಷರು ನೀಡುವ ಸಕಾರಾತ್ಮಕ ಕೊಡುಗೆಗಳನ್ನು ಗುರುತಿಸಲು ಈ ದಿನವನ್ನು ಮೀಸಲಿಡಲಾಗಿದೆ.

⭐ *ರಾಣಿ ಲಕ್ಷ್ಮೀಬಾಯಿ ಜನನ (1828).* 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವೀರನಾರಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರು ವಾರಣಾಸಿಯಲ್ಲಿ ಜನಿಸಿದರು.

⭐ *ಕೇಶವ ಚಂದ್ರ ಸೇನ್ ಜನನ (1838).* ಬ್ರಹ್ಮ ಸಮಾಜದ ಪ್ರಮುಖ ನಾಯಕ ಮತ್ತು ಸಮಾಜ ಸುಧಾರಕರಾದ ಕೇಶವ ಚಂದ್ರ ಸೇನ್ ಅವರು ಜನಿಸಿದರು.

⭐ *ಇಂದಿರಾ ಗಾಂಧಿ ಜನನ (1917).* ಭಾರತದ ಮೊದಲ ಮಹಿಳಾ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಅಲಹಾಬಾದ್‌ನಲ್ಲಿ ಜನಿಸಿದರು. ಇವರ ಜನ್ಮದಿನವನ್ನು ದೇಶದಲ್ಲಿ ರಾಷ್ಟ್ರೀಯ ಏಕೀಕರಣ ದಿನವಾಗಿ ಆಚರಿಸಲಾಗುತ್ತದೆ.

⭐ *ದಾರಾ ಸಿಂಗ್ ಜನನ (1928).* ವಿಶ್ವಪ್ರಸಿದ್ಧ ಕುಸ್ತಿಪಟು ಮತ್ತು ನಟ ದಾರಾ ಸಿಂಗ್ ಅವರು ಪಂಜಾಬ್‌ನಲ್ಲಿ ಜನಿಸಿದರು

⭐ *9ನೇ ಏಷ್ಯನ್ ಕ್ರೀಡಾಕೂಟ ಆರಂಭ (1982).* ನವದೆಹಲಿಯಲ್ಲಿ 9ನೇ ಏಷ್ಯನ್ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಭಾರತದಲ್ಲಿ ಬಣ್ಣದ ದೂರದರ್ಶನ (Color TV) ಪ್ರಸಾರವು ವ್ಯಾಪಕವಾಗಿ ಜನಪ್ರಿಯವಾಯಿತು

⭐ *ಪರಿಸರ ಸಂರಕ್ಷಣಾ ಕಾಯ್ದೆ ಜಾರಿ (1986).* ಭೋಪಾಲ್ ಅನಿಲ ದುರಂತದ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ಪರಿಸರ ಸಂರಕ್ಷಣಾ ಕಾಯ್ದೆಯನ್ನು (Environment Protection Act) ಜಾರಿಗೆ ತಂದಿತು.

⭐ *ಐಶ್ವರ್ಯಾ ರೈ ವಿಶ್ವ ಸುಂದರಿ (1994).* ಭಾರತದ ಐಶ್ವರ್ಯಾ ರೈ ಅವರು ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ ನಡೆದ ಸ್ಪರ್ಧೆಯಲ್ಲಿ 'ಮಿಸ್ ವರ್ಲ್ಡ್' (ವಿಶ್ವ ಸುಂದರಿ) ಕಿರೀಟವನ್ನು ಮುಡಿಗೇರಿಸಿಕೊಂಡರು

⭐ *ಕಲ್ಪನಾ ಚಾವ್ಲಾ ಬಾಹ್ಯಾಕಾಶ ಯಾನ (1997).* ಭಾರತೀಯ ಮೂಲದ ಗಗನಯಾತ್ರಿ ಕಲ್ಪನಾ ಚಾವ್ಲಾ ಅವರು ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

⭐ *ಪೋರ್ಟೊ ರಿಕೊ ಪತ್ತೆ (1493).* ನಾವಿಕ ಕ್ರಿಸ್ಟೋಫರ್ ಕೊಲಂಬಸ್ ತನ್ನ ಎರಡನೇ ಸಮುದ್ರಯಾನದಲ್ಲಿ ಪೋರ್ಟೊ ರಿಕೊ ದ್ವೀಪವನ್ನು ತಲುಪಿದ.

⭐ *ಗೆಟ್ಟಿಸ್‌ಬರ್ಗ್ ಭಾಷಣ (1863).* ಅಮೆರಿಕದ ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರು ಅಮೆರಿಕನ್ ಅಂತರ್ಯುದ್ಧದ ಸಮಯದಲ್ಲಿ ತಮ್ಮ ಐತಿಹಾಸಿಕ 'ಗೆಟ್ಟಿಸ್‌ಬರ್ಗ್ ಭಾಷಣ'ವನ್ನು ಮಾಡಿದರು. ಪ್ರಜಾಪ್ರಭುತ್ವದ ವ್ಯಾಖ್ಯಾನಕ್ಕೆ ಈ ಭಾಷಣ ಹೆಸರುವಾಸಿಯಾಗಿದೆ

⭐ *ಸೋವಿಯತ್ ಪ್ರತಿ-ದಾಳಿ (1942).* ಎರಡನೇ ಮಹಾಯುದ್ಧದ ನಿರ್ಣಾಯಕ ಸ್ಟಾಲಿನ್‌ಗ್ರಾಡ್ ಕದನದಲ್ಲಿ ಸೋವಿಯತ್ ಸೇನೆಯು ಜರ್ಮನ್ ಪಡೆಗಳ ವಿರುದ್ಧ 'ಆಪರೇಷನ್ ಯುರೇನಸ್' ಹೆಸರಿನಲ್ಲಿ ಬೃಹತ್ ಪ್ರತಿ-ದಾಳಿಯನ್ನು ಆರಂಭಿಸಿತು

⭐ *ಅನ್ವರ್ ಸಾದತ್ ಇಸ್ರೇಲ್ ಭೇಟಿ (1977).* ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದತ್ ಇಸ್ರೇಲ್‌ಗೆ ಭೇಟಿ ನೀಡಿದ ಮೊದಲ ಅರಬ್ ನಾಯಕ ಎನಿಸಿಕೊಂಡರು. ಈ ಭೇಟಿಯು ಮಧ್ಯಪ್ರಾಚ್ಯ ಶಾಂತಿ ಪ್ರಕ್ರಿಯೆಗೆ ಹೊಸ ತಿರುವು ನೀಡಿತು.

⭐ *ರೀಗನ್-ಗೋರ್ಬಚೇವ್ ಶೃಂಗಸಭೆ (1985).* ಶೀತಲ ಸಮರದ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಅಮೆರಿಕ ಅಧ್ಯಕ್ಷ ರೊನಾಲ್ಡ್ ರೀಗನ್ ಮತ್ತು ಸೋವಿಯತ್ ನಾಯಕ ಮಿಖಾಯಿಲ್ ಗೋರ್ಬಚೇವ್ ಜಿನೀವಾದಲ್ಲಿ ಮೊದಲ ಬಾರಿಗೆ ಭೇಟಿಯಾದರು ಹೇಳಿದರು

ಉದ್ಯೋಗ ಮಾಹಿತಿ...

. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
* ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
* ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
* ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
* ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
* ಅಧಿಕೃತ ವೆಬ್‌ಸೈಟ್: https://cetonline.karnataka.gov.in

2. ಇಂಡಿಯನ್ ಬ್ಯಾಂಕ್ (Indian Bank Apprentice Recruitment 2026)
* ಹುದ್ದೆಗಳ ವಿವರ: ಗ್ರಾಹಕ ಸೇವಾ ಅಪ್ರೆಂಟಿಸ್ Apprentice) ಹುದ್ದೆಗಳು (ಕರ್ನಾಟಕ ವಲಯ 1 ಸೇರಿದಂತೆ ಅಖಿಲ ಭಾರತ ಮಟ್ಟದಲ್ಲಿ).
* ಖಾಲಿ ಹುದ್ದೆಗಳು: 1,500 ಹುದ್ದೆಗಳು.
* ವಿದ್ಯಾರ್ಹತೆ: ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ (Degree).
* ಸಂಬಳ: ಮಾಸಿಕ ಸ್ಟೈಫಂಡ್ ರೂ. 15,000 (1 ವರ್ಷದ ಅವಧಿಗೆ).
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://www.indianbank.in

3. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Junior Engineer & Technical Posts)
*** ಹುದ್ದೆಗಳ ವಿವರ: ಅಸಿಸ್ಟೆಂಟ್ ಟೌನ್ ಪ್ಲಾನರ್,** ಕಿರಿಯ ಇಂಜಿನಿಯರ್ (Junior Engineer - Civil) ಹಾಗೂ ಡ್ರಾಫ್ಟ್‌ಸ್ಮನ್ ಹುದ್ದೆಗಳು.
* ಖಾಲಿ ಹುದ್ದೆಗಳು: 218 ಹುದ್ದೆಗಳು (RPC ಮತ್ತು ಕಲ್ಯಾಣ ಕರ್ನಾಟಕ).
* ವಿದ್ಯಾರ್ಹತೆ: ಸಿವಿಲ್ ಇಂಜಿನಿಯರಿಂಗ್ ಅಥವಾ ಸಂಬಂಧಿತ ಟ್ರೇಡ್‌ನಲ್ಲಿ ಡಿಪ್ಲೊಮಾ (Diploma).
* ಸಂಬಳ: ರೂ. 54,175 ರಿಂದ ರೂ. 99,400
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea

4. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Female Supervisor Recruitment)
* ಹುದ್ದೆಗಳ ವಿವರ: ಮಹಿಳಾ ಮೇಲ್ವಿಚಾರಕಿ (Female Supervisor - Group-C) ಹುದ್ದೆಗಳು.
* ಖಾಲಿ ಹುದ್ದೆಗಳು: 141 ಹುದ್ದೆಗಳು.
* ವಿದ್ಯಾರ್ಹತೆ: ಸಂಬಂಧಿತ ವಿಷಯದಲ್ಲಿ ಪದವಿ ಅಥವಾ ಸರ್ಕಾರದ ನಿಯಮಾನುಸಾರ ವಿದ್ಯಾರ್ಹತೆ.
* ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ಆಕರ್ಷಕ ವೇತನ ಹಾಗೂ ಭತ್ಯೆಗಳು.
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://cetonline.karnataka.gov.in

ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಬೆಳೆಸಲು ಎನ್‌ಎಸ್‌ಎಸ್ ಸಹಕಾರಿ...

ಕಾವೇರಿ ಕಾಲೇಜಿನ ಎನ್‌ಎಸ್‌ಎಸ್ ಶಿಬಿರ ಸಮಾರೋಪದಲ್ಲಿ ಮುಲ್ಲೆಂಗಡ ಕುಟ್ಟಪ್ಪ ಅಭಿಪ್ರಾಯ

ಪುತ್ತರಿರ ಕರುಣ್ ಕಾಳಯ್ಯ



@Nadubadenews, ನ.19: ವಿರಾಜಪೇಟೆಯ ಕಾವೇರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಟಿ.ಬಿ. ಮತ್ತು ನಶಾಮುಕ್ತ ಭಾರತ ಅಭಿಯಾನದಡಿ ಕಂಡಂಗಾಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ನ. 18ರಂದು ಬುಧವಾರ ನಡೆಯಿತು.

ಸಮಾರಂಭದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡಿದ್ದ ವಿರಾಜಪೇಟೆಯ ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಲ್ಲೆಂಗಡ ಎಂ. ಕುಟ್ಟಪ್ಪ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದ ಉದ್ದೇಶ ಕೇವಲ ಏಳು ದಿನಗಳಿಗೆ ಸೀಮಿತವಾಗದೆ, ಅದನ್ನು ಜೀವನದ ಭಾಗವನ್ನಾಗಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನ, ನಾಯಕತ್ವದ ಗುಣ, ಶಿಸ್ತು ಮತ್ತು ಸಂಯಮ ಬೆಳೆಸುವಲ್ಲಿ ಎನ್‌ಎಸ್‌ಎಸ್ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳ ದುಶ್ಚಟಗಳಿಗೆ ಬಲಿಯಾಗದೆ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಸಮಾಜಕ್ಕೆ ಉತ್ತಮ ಪ್ರಜೆಗಳಾಗಬೇಕು. ಜೀವನದಲ್ಲಿ ಶಿಸ್ತು, ಸಂಯಮ ಹಾಗೂ ಸಮಯಪಾಲನೆಯನ್ನು ರೂಢಿಸಿಕೊಳ್ಳಬೇಕು. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳನ್ನು ಹಿತಮಿತವಾಗಿ ಬಳಸಬೇಕು. ಕಾನೂನುಬಾಹಿರ ಚಟುವಟಿಕೆ ದೂರವಿದ್ದು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಕಂಡಂಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಕೆಂಜಂಗಡ ಗಣಪತಿ, ಶಾಲೆಯ ಕ್ರೀಡಾ ಸಮಿತಿ ಅಧ್ಯಕ್ಷ ಬಲ್ಲಡಿಚಂಡ ರವಿ ಸೋಮಯ್ಯ ಹಾಗೂ ಜೋಡು ಭಗವತಿ ದೇವಸ್ಥಾನದ ನಾಡತಕ್ಕರಾದ ಮಳವಂಡ ಭುವೇಶ್ ದೇವಯ್ಯ ಅವರು ಮಾತನಾಡಿ, ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ನಾಯಕತ್ವ ಮತ್ತು ಶಿಸ್ತಿನ ಗುಣಗಳನ್ನು ಬೆಳೆಸುತ್ತದೆ. ಶಿಬಿರದಲ್ಲಿ ಕಲಿತ ಮೌಲ್ಯಗಳನ್ನು ಮುಂದಿನ ಜೀವನದಲ್ಲಿಯೂ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಶಾಲೆಯ ಮುಖ್ಯೋಪಾಧ್ಯಾಯ ಬಿ.ಟಿ. ದೇವರಾಜು ಮಾತನಾಡಿ, ಶಿಬಿರಾರ್ಥಿಗಳು ಶಿಬಿರದ ಸಂಪೂರ್ಣ ಸದುಪಯೋಗ ಪಡೆದುಕೊಂಡಿದ್ದು, ಅವರಿಂದ ಶಾಲೆಯ ವಿದ್ಯಾರ್ಥಿಗಳೂ ಸ್ಫೂರ್ತಿ ಪಡೆದಿದ್ದಾರೆ. ಸಮಾಜಸೇವೆಯೇ ಶಿಬಿರದ ಪ್ರಮುಖ ಉದ್ದೇಶವಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾವೇರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಪದ್ಮ ಎಂ.ಕೆ. ಮಾತನಾಡಿ, ಸ್ವಯಂಸೇವಕರು ರಾಷ್ಟ್ರಸೇವೆ ಮಾಡಲು ಸದಾ ಸಿದ್ಧರಿರಬೇಕು. ರಾಷ್ಟ್ರೀಯ ಸೇವಾ ಯೋಜನೆಯನ್ನು ಕಾಲೇಜು ಜೀವನಕ್ಕೆ ಮಾತ್ರ ಸೀಮಿತಗೊಳಿಸದೆ, ವೈಯಕ್ತಿಕ ಜೀವನದಲ್ಲಿಯೂ ಅಳವಡಿಸಿ ಕೊಳ್ಳಬೇಕು ಎಂದರು.

ಕಾರ್ಯಕ್ರಮಾಧಿಕಾರಿ ಅನುಪಮ ತಿಮ್ಮಯ್ಯ ಶಿಬಿರದ ವರದಿ ವಾಚಿಸಿ, ಸ್ವಯಂಸೇವಕರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಜೋಡು ಭಗವತಿ ದೇವಸ್ಥಾನದ ಊರುತಕ್ಕರಾದ ಮೂಕಚಂಡ ದೇವಯ್ಯ ಶಿಬಿರದ ಜ್ಯೋತಿ ಬೆಳಗಿಸಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಎನ್‌ಎಸ್‌ಎಸ್ ಗೀತೆಯನ್ನು ರೋಷಿನಿ ಮತ್ತು ತಂಡ ಹಾಡಿದರು. ಎನ್‌ಎಸ್‌ಎಸ್ ಉದ್ದೇಶಗಳನ್ನು ಇಶಾಮ್ ತಿಳಿಸಿದರು. ಶಿಬಿರದ ಅನುಭವಗಳನ್ನು ಶಿಬಿರಾರ್ಥಿಗಳಾದ ನಾಯಕಿ ವೀಣಾ, ಶಿವಾನಿ, ರಚನ ಹಾಗೂ ನಾಯಕ ಗಣಪತಿ ಹಂಚಿಕೊಂಡರು. ಅನುಶ್ರೀ ಮತ್ತು ತಂಡ ಪ್ರಾರ್ಥಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಗಾಯತ್ರಿ ಕೆ.ಪಿ. ಸ್ವಾಗತಿಸಿ, ಅನುಪಮ ತಿಮ್ಮಯ್ಯ ವಂದಿಸಿದರು. ವಿದ್ಯಾರ್ಥಿಗಳಾದ ವೀಣಾ ಮತ್ತು ಶಯನ ಕಾರ್ಯಕ್ರಮ ನಿರೂಪಿಸಿದರು.

ಗ್ರಾಮಸ್ಥರು, ದಾನಿಗಳು, ಕ್ರೀಡಾ ಸಮಿತಿ ಪದಾಧಿಕಾರಿಗಳು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಕಾವೇರಿ ಕಾಲೇಜಿನ ಉಪನ್ಯಾಸಕರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಭಾನುವಾರ ಸೋಮವಾರಪೇಟೆಯಲ್ಲಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಸಮಾವೇಶ...



@Nadubadenews, ನ.19:ಮಡಿಕೇರಿ: ಜೆಡಿಎಸ್ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾ